2) ಇಲ್ಲ ಮಾಡಿಲ್ಲ.

ಪುರಸಭೆ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ನಿರ್ಮಲ ಕರ್ನಾಟಕ ಯೋಜನೆ.

809 - ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) : ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಪುರಸಭೆ/ಪಟ್ಟಣ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ನಿರ್ಮಲ ಕರ್ನಾಟಕ ಯೋಜನೆ ಪ್ರಾರಂಭಿಸುವ ಬಗ್ಗೆ ಸರ್ಕಾರವು ಕ್ರಮ ತೆಗೆದುಕೊಳ್ಳುವುದೇ?*

ಆ) *ಹಾಗಿದ್ದಲ್ಲಿ ಎಂದು ಪ್ರಾರಂಭಿಸಲಾಗುವುದು?*

ಇ) *ಹಾಗಿಲ್ಲದಿದ್ದಲ್ಲಿ ನಾಗರೀಕರಿಗೆ ಆಗುವ ತೊಂದರೆಯನ್ನು ಯಾವ ರೀತಿಯಿಂದ ಹೋಗಲಾಡಿಸಲಾಗುವುದು?*

ಶ್ರೀ ಮೀರಾಜುದ್ದೀನ್ ಎನ್. ಪಟೇಲ್ (ಪೌರಾಡಳಿತ ರಾಜ್ಯ ಸಚಿವರು)

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಸಮಗ್ರ ಕಡಿಮೆ ವೆಚ್ಚದ ಶೌಚಾಲಯ ನಿರ್ಮಾಣ ಯೋಜನೆ (ಐಪಿಎಲ್‌ಸಿಎಸ್)ಯನ್ನು ಜಾರಿಗೆಗೊಳಿಸುವ ಮೂಲಕ.

ರಾಜ್ಯದಲ್ಲಿ ಮಂಜೂರಾಗಿರುವ ಹೊಸ ಸಕ್ಕರೆ ಕಾರ್ಖಾನೆಗಳು

810 - ಶ್ರೀ ಯು.ಬಿ.ಬಣಕಾರ್ (ಹಿರೇಕೆರೂರು) : ಮಾನ್ಯ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1996-97ನೇ ಸಾಲಿನಲ್ಲಿ ರಾಜ್ಯದಲ್ಲಿ ಮಂಜೂರಾದ ಹೊಸ ಸಕ್ಕರೆ ಕಾರ್ಖಾನೆಗಳ ಸಂಖ್ಯೆ ಎಷ್ಟು? ಹಾಗೂ ಅವು ಯಾವುವು?*

ಆ) *ಸಹಕಾರ ಸಕ್ಕರೆ ಕಾರ್ಖಾನೆಗಳ ಮಂಜೂರಾತಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಹಾಕಿದ ಷರತ್ತುಗಳು ಏನು?*

ಶ್ರೀ ಉಮೇಶ್ ವಿ. ಕತ್ತಿ (ಸಕ್ಕರೆ ಸಚಿವರು) :

ಅ) 1996-97ನೇ ಸಾಲಿನಲ್ಲಿ ರಾಜ್ಯದಲ್ಲಿ 22 ಹೊಸ ಸಕ್ಕರೆ ಕಾರ್ಖಾನೆಗಳ ಸ್ಥಾಪನೆಗಾಗಿ ಅನುಮತಿ ಪತ್ರಗಳು ಲಭಿಸಿವೆ. ಇವುಗಳ ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಹೊಸ ಸಕ್ಕರೆ ಕಾರ್ಖಾನೆಯ ಸ್ಥಾಪನೆಗೆ ಅನುಮತಿ ಪತ್ರ ಮಂಜೂರು ಮಾಡುವ ಅಧಿಕಾರ ಕೇಂದ್ರ ಸರ್ಕಾರಕ್ಕೆ ಇರುತ್ತದೆ. ಸಹಕಾರಿ ಕ್ಷೇತ್ರದಲ್ಲಿ ಹೊಸ ಕಾರ್ಖಾನೆಯನ್ನು ಸ್ಥಾಪಿಸಲು ಕಾಯೆ

ಅಡಿಯಲ್ಲಿ ನೊಂದಣಿಯಾಗಬೇಕು. ಹೀಗೆ ನೊಂದಣಿ ಮಾಡುವ ಮೊದಲು ಉದ್ದೇಶಿತ ಸಹಕಾರಿ ಸಕ್ಕರೆ ಕಾರ್ಖಾನೆಯು ರೂ. 2.50 ಲಕ್ಷ ಷೇರುಧನವನ್ನು ಸಂಗ್ರಹಿಸಿರಬೇಕು. ರಾಜ್ಯ ಸರ್ಕಾರವು ಉದ್ದೇಶಿತ ಸಹಕಾರಿ ಸಕ್ಕರೆ ಕಾರ್ಖಾನೆಯ ಸ್ಥಾಪನೆ ಬಗ್ಗೆ ಕೇಂದ್ರ ಸರ್ಕಾರಕ್ಕೆ ವರದಿ ಮಾಡಬೇಕು. ಉದ್ದೇಶಿತ ಕಾರ್ಖಾನೆಯು ಹಾಲಿ ಸ್ಥಾಪಿತವಾಗಿರುವ/ಪರವಾನಗೆ ಹೊಂದಿರುವ ಕಾರ್ಖಾನೆಗಳಿಂದ ಉದ್ದೇಶಿತ ಕಾರ್ಖಾನೆಯು ಕನಿಷ್ಟ 15 ಕಿ.ಮಿ.ರೇಡಿಯಲ್ ಅಂತರವನ್ನು ಹೊಂದಿರಬೇಕು ಹಾಗೂ ಉದ್ದೇಶಿತ ಕಾರ್ಖಾನೆಗೆ ಅಗತ್ಯವಿರುವ ಕಬ್ಬು ಲಭ್ಯವಾಗುವ ಸಾಧ್ಯತೆ ಇರಬೇಕೆಂಬ ಷರತ್ತು ವಿಧಿಸಿದೆ.

ರಾಜ್ಯದಲ್ಲಿ ಹೊಸ ಸಕ್ಕರೆ ಕಾರ್ಖಾನೆಗಳ ಸ್ಥಾಪನೆಗಾಗಿ 1996-97ರಲ್ಲಿ ಭಾರತ ಸರ್ಕಾರ ನೀಡಿರುವ ಅನುಮತಿ ಪತ್ರಗಳು.

ಕ್ರ.ಸಂ.	ಸಕ್ಕರೆ ಕಾರ್ಖಾನೆಯ ಹೆಸರು
	ಸಹಕಾರಿ ವಲಯ :
1)	ಸೋಮೇಶ್ವರ ಸಹಕಾರಿ ಸಕ್ಕರೆ ಕಾರ್ಖಾನೆ, ಬೈಲಹೊಂಗಲ, ಬೆಳಗಾಂ ಜಿಲ್ಲೆ
2)	ನರಗುಂದ ಸಹಕಾರಿ ಸಕ್ಕರೆ ಕಾರ್ಖಾನೆ, ಕೊನ್ನೂರು, ನರಗುಂದ ತಾಲ್ಲೂಕು, ಧಾರವಾಡ ಜಿಲ್ಲೆ.
3)	ಮೆ// ಧನಲಕ್ಷ್ಮಿ ಸಹಕಾರಿ ಸಕ್ಕರೆ ಕಾರ್ಖಾನೆ(ವಿ), ಟೌನ್‌ಪೇಟೆ, ರಾಮದುರ್ಗ ತಾಲ್ಲೂಕು ಬೆಳಗಾಂ ಜಿಲ್ಲೆ.
	ಸಾರ್ವಜನಿಕ ವಲಯ:
4)	ಮಂಡ್ಯ ನ್ಯಾಷನಲ್‌ಪೇಪರ್‌ಮಿಲ್ಸ್, ಬೆಳಗೊಳ, ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ
	ಖಾಸಗಿ ವಲಯ :
5)	ಶಶಿಕಾಂತ್ ಸಿದ್ನಾಲ್ ಶುಗರ್ಸ್, ಮನೋಳಿ, ಸಾಂದತ್ತಿ ತಾಲ್ಲೂಕು, ಬೆಳಗಾಂ ಜಿಲ್ಲೆ
6)	ಇಂಡಿಯಾ ಸಿಮೆಂಟ್ಸ್ ಲಿ., ಮಲ್ಲೇನಹಳ್ಳಿ, ಕೆ.ಆರ್.ಪೇಟೆ ತಾಲ್ಲೂಕು, ಮಂಡ್ಯ ಜಿಲ್ಲೆ.
7)	ಪ್ರೇಮ ಶುಗರ್ ಅಂಡ್ ಕೆಮಿಕಲ್ಸ್ ಕಾರ್ಪೊರೇಷನ್ ಲಿ., ತಿಮ್ಲಾಪುರ, ನಾಗಮಂಗಲ ತಾಲ್ಲೂಕು, ಮಂಡ್ಯ ಜಿಲ್ಲೆ.
8)	ಚಿಂಚೋಳಿ ಶುಗರ್ಸ್ ಲಿ., ಚಿಂಚೋಳಿ, ಗುಲ್ಬರ್ಗಾ ಜಿಲ್ಲೆ
9)	ವೆಸ್ಟ್ ಕೋಸ್ಟ್ ಪೇಪರ್ ಮಿಲ್ಸ್ ಲಿ., ದಾಂಡೇಲಿ, ಹಳಿಯಾಳ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ.
10)	ಜೆಮ ಶುಗರ್ಸ್ ಲಿ., ಕುಂದರಗಿ, ಬೀಳಗಿ ತಾಲ್ಲೂಕು, ಬಿಜಾಪುರ ಜಿಲ್ಲೆ.
11)	ಪ್ರಭುಲಿಂಗೇಶ್ವರ ಶುಗರ್ಸ್ ಲಿ.,ಸಿದ್ದಾಪುರ, ಜಮಖಂಡಿ ತಾಲ್ಲೂಕು, ಬಿಜಾಪುರ ಜಿಲ್ಲೆ
12)	ಶ್ಯಾಮನೂರು ಶುಗರ್ಸ್ ಲಿ., ದುಗ್ಗಾವತಿ ಗ್ರಾಮ, ಹರಪನಹಳ್ಳಿ ತಾಲ್ಲೂಕು, ಬಳ್ಳಾರಿ ಜಿಲ್ಲೆ.

ಕ್ರ.ಸಂ.	ಸಕ್ಕರೆ ಕಾರ್ಖಾನೆಯ ಹೆಸರು
13)	ಚಂದ್ರಪ್ರಕಾಶ್ ಶುಗರ್ಸ್ ಲಿ.,ಹೇರೂರು, ಗುಬ್ಬಿ ತಾಲ್ಲೂಕು, ತುಮಕೂರು ಜಿಲ್ಲೆ.
14)	ಶಿವಶಕ್ತಿ ಶುಗರ್ಸ್ ಲಿ.,ಸಾಂದತ್ತಿ, ರಾಯಬಾಗ್‌ತಾಲ್ಲೂಕು, ಬೆಳಗಾಂ ಜಿಲ್ಲೆ.
15)	ಅಥಣಿ ಫಾರ್ಮರ್ಸ್ ಶುಗರ್ಸ್ ಫ್ಯಾಕ್ಟರಿ, ಜಾಂಬಗಿ, ಅಥಣಿ ತಾ: ಬೆಳಗಾಂ ಜಿಲ್ಲೆ.
16)	ಇಂಡಿಯನ್ ಕೇನ್‌ಪವರ್ ಲಿ., ಕೊಲ್ಹಾರ, ಬಸವನಬಾಗೇವಾಡಿ ತಾಲ್ಲೂಕು, ಬಿಜಾಪುರ ಜಿಲ್ಲೆ.
17)	ಮನಾಲಿ ಶುಗರ್ಸ್ ಲಿ., ಯಲಗೂರು, ಮುದ್ದೇಬಿಹಾಳತಾಲ್ಲೂಕು, ಬಿಜಾಪುರ ಜಿಲ್ಲೆ.
18)	ಶಿರಗುಪ್ಪಿ ಶುಗರ್ಸ್ ಲಿ., ಐಗಾಳಿ, ಅಥಣಿ ತಾಲ್ಲೂಕು, ಬೆಳಗಾಂ ಜಿಲ್ಲೆ.
19)	ಮೈಚಾಮುಂಡೇಶ್ವರಿ ಶುಗರ್ಸ್ ಲಿ., ಗಂಗೂರು, ದೊಡ್ಡಬ್ಯಾಗತಹಳ್ಳಿ, ಹೊಳೆನರಸೀಪುರ ತಾಲ್ಲೂಕು, ಹಾಸನ ಜಿಲ್ಲೆ.
20)	ವಿಶ್ವನಾಥ ಶುಗರ್ಸ್, ಬೆಲ್ಲದ ಬಾಗೇವಾಡಿ, ಹುಕ್ಕೇರಿ ತಾಲ್ಲೂಕು, ಬೆಳಗಾಂ ಜಿಲ್ಲೆ.
21)	ಮಲ್ನಾಡ್ ಶುಗರ್ಸ್ ಕಂಪನಿ ಲಿ., ಅರಸನಘಟ್ಟ, ಭದ್ರಾವತಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.
22)	ಎನ್.ಪಿ.ಆರ್. ಶುಗರ್ಸ್, ಕಂಚುಗಾರನಹಳ್ಳಿ, ರಾಮನಗರ ತಾಲ್ಲುಕು, ಬೆಂಗಳೂರು ಜಿಲ್ಲೆ.

ಬಳ್ಳಾರಿ ನಗರ ಸಭೆಗೆ ಮಂಜೂರು ಮಾಡಿರುವ ಅನುದಾನ

811 - ಶ್ರೀ ಎಂ. ದಿವಾಕರ ಬಾಬು (ಬಳ್ಳಾರಿ) : ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1996-97ನೇ ಸಾಲಿನಲ್ಲಿ ಬಳ್ಳಾರಿ ನಗರಸಭೆಗೆ ಒಟ್ಟು ಮಂಜೂರು ಮಾಡಿದ ಅಭಿವೃದ್ಧಿ ಅನುದಾನವೆಷ್ಟು?*

ಆ) *ಅದರಲ್ಲಿ ಎಷ್ಟು ಮೊತ್ತವನ್ನು ಬಿಡುಗಡೆ ಮಾಡಿದೆ?*

ಇ) *ಅಭಿವೃದ್ಧಿ ಅನುದಾನವನ್ನು ಬಿಡುಗಡೆ ಮಾಡದೆ ಇರುವುದರಿಂದ ಬಳ್ಳಾರಿ ನಗರ ಸಭೆಯ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕಾರ್ಯಗಳು ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?*

ಈ) *ಉಳಿದ ಮೊತ್ತವನ್ನು ಬಿಡುಗಡೆ ಮಾಡಲು ತೆಗೆದುಕೊಂಡ ಕ್ರಮಗಳೇನು?*

ಶ್ರೀ ಮೀರಾಜುದ್ದೀನ್ ಎನ್. ಪಟೇಲ್ (ಪೌರಾಡಳಿತ ರಾಜ್ಯ ಸಚಿವರು) :

ಅ) ನಿಗಧಿಪಡಿಸಿಲ್ಲ.

ಆ) ಇಲ್ಲ.

ಇ) ಇಲ್ಲ.